ನಗುತ್ತಾರಂತೆ. "ನನಗೆ ನಾಚ್ಕೆ. ಸತ್ರೂ ಶಾಲೀಗೆ ಹೋಗಂವಲ್ಲ" ಎಂದಿದ್ದ. ಕಾಮೇಶ್ವರ ನೀಡುತ್ತಿದ್ದ ಹಿಂಸೆ ಮತ್ತು ಶಾಲೆಯ ಅವಮಾನದ ನಡುವೆ ದತ್ತುವಿನ ಜೀವನ ಯಾತನಾಮಯವಾಗಿತ್ತು.

ಮೊರದಲ್ಲಿ ಒಟ್ಟುಗೂಡಿಸಿದ ವರಲೆ ಹುಳಗಳನ್ನು ಎಸೆಯಲು ಹೊರಗೆ ಬಂದ ಸಲೀಲತ್ತೆ, "ಒಂದು ತಿಂಗಳೀಚೆಯಿಂದ ದತ್ತುನ ಕುಡ್ತಾ ಹೆಚ್ಚಾಯ್ತು. ಶಾಲೆಗೆ ಹೋಗ್ದೆ ಜೀವನಾ ಹಾಳ್ ಮಾಡ್ಕಂಡ. ನಿನ್ನ ಮಾತಾದ್ರೂ ಕೇಳ್ತೊ, ನೋಡು" ಎಂದಳು.

ದತ್ತು ನಾರಸಿಂಹನಂತೆ ಕದ ಒಡೆವಂತೆ ದೂಕಿ ಹೊರ ಬಂದ. "ನನ್ನ ಜೀವನ ಹಾಳು ಮಾಡ್ದವರು ನೀನು, ನಿನ್ನ ಹಿರಿ ಮಗಳು, ನಿನ್ನ ಮನೆಹಾಳ ಅಳಿಯ. ಆ ದಿನ ಅಪ್ಪನ ತಿಥಿ ದಿವ್ಸ ಕಾಮೇಶ ಭಾವ ಭೀಮ ಗದೆಲಿ ಹೊಡ್ದಾಂಗೆ ತೊಡೆಗೆ ಹೊಡಿವಾಗ ನೀವ್ಯಾರೂ ತಪ್ಸಿದ್ರಿಲ್ಲೆ; ಆ ಕ್ಷಣದಲ್ಲೆ ನಾನು ಈ ಮನೇಲಿ ಅನಾಥ ಅನ್ಸಿಹೋತು. ನಿನ್ನ ಮಗ್ಳ ಹಾದ್ರದ ದೆಸೆಯಿಂದ ಶಾಲೆ ಬಿಟ್ಟೆ. ಮನೇಲಿ ಅಳಿಯಾ ಹೊಡಿತಿದ್ನಾ. ಅಪ್ಪ ಗಂಜೀ ಉಂಡ್ರೂ ಅಡ್ಡಿಲ್ಲೆ ಮರ್ಯಾದಿ ತೆಗಿಯಡ ಹೇಳ್ತಿದ್ದ. ಆ ಮಾತಿಗೆ ಸಹಿಸ್ಕಂಡೆ ಎಲ್ಲ. ಗೊತ್ತಾತಾ, ಗೊತ್ತಾತಾ...'' ಕೋಳು ಹಾರುವಂತೆ ಕಿರುಚಿದ. ಅವನ ಉಬ್ಬಿದ ನರಗಳ ಕೊರಳು, ಕಿಸಿದ ಕಣ್ಣುಗಳು, ತುಟಿಯಂಚಿಗೆ ಸಂಚಯಿಸಿದ ನೊರೆ ಜೊಲ್ಲು ಎಲ್ಲ ಈ ವರೆಗಿನ ಅಸಹಾಯಕತೆ, ನಿರಾಸೆ, ಅವಮಾನಗಳನ್ನು ಒಂದೇ ಏಟಿಗೆ ತೆರೆದು ತೋರುತ್ತಿದ್ದವು.

ಅನಂತನ ತಲೆಯಲ್ಲಿ ಶೂನ್ಯ ಕವಿದಿತ್ತು. ಅದೇ ಆವೇಶದ ಅವತಾರದಲ್ಲಿ ದತ್ತು ಜಗಲಿಯ ಗಿಳಿಗುಟ್ಟಕ್ಕೆ ನೇತು ಬಿದ್ದ ಮಡಿಕೆ ಪ್ಯಾಂಟೊಳಗೆ ಕಾಲು ತೂರಿ, ಮೇಲಿಂದ ಬೆವರು ವಾಸನೆಯ ಟೀಶರ್ಟ್ ಸಿಕ್ಕಿಸಿದ. ಇಟ್ಟಲ್ಲೆ ಅವನ ಬಟ್ಟೆಗೆ ಒರಲೆ ಮಣ್ಣು ಮೆತ್ತಲು ತೊಡಗಿದ್ದವು; ತತ್ ಎಂದು ಕೊಡವಿದ; ಅಲ್ಲಲ್ಲಿ ನೆಲದ ಸಣ್ಣ ರಂಧ್ರಗಳಿಂದ ಹುಳಗಳು ಹೊರಬಂದು ಹರಿದಾಡಿದವು; ಅಂಗಾಲಲ್ಲಿ ಅವುಗಳನ್ನು ಚರ್ರನೆ ಒರೆದ; ಅಪ್ಪನ ಕಾಲದ ಲಟಾರಾದ ಸೈಕಲ್ಲನ್ನು ಶೆಡ್ಡಿನಿಂದ ಹೊರ ತೆಗೆದು ಪುಸುಪುಸುನೆ ಹವಾ ಹಾಕಿದ. "ಅಂತಣ್ಣ ಅಂಗ್ಡಿಗೆ ಹೋಗ್ವಾ, ಅಲ್ಲೆ ಮಾತಾಡ್ವಾ" ಎಂದ. "ಅನ್ನ ಮಾಡ್ತೆ, ಉಂಡ್ಕಂಡು ಹೋಗಿ" ಸಲೀಲತ್ತೆ ಚಿಟ್ಟೆಗೆ ಬಂದು ಅಲವತ್ತುಕೊಂಡಳು. "ಅಂತಣ್ಣ, ಮತ್ತೊಂದು ವಿಷಯಾ ಗೊತ್ತಿದ್ನಾ ನಿನಗೆ. ನನ್ನ ಮದುವೆಗೆ ಅಂತ ಆಯಿ ಬಂಗಾರ ಗೇಯಿಸಿ ಅಜ್ಜನ ಮನೇಲಿ ಇಟ್ಟಿದಡ; ಸೊಸೆ ತಾಬಾ ಕೊಡ್ತೆ; ನನ್ನ ಕೈಗೆ ಸಿಕ್ಕರೆ ಕುಡ್ದು ಹಾಳ ಮಾಡ್ತೆ; ಚಲೋ ಕೂಸಿದ್ರೆ ನೋಡಿ ಎಂದು ಊರಿಗೆಲ್ಲ ಗುಲ್ಲು ಮಾಡಿದ್ದು. ಮಗನ ಮೇಲೆ ನಂಬಿಕೆ ಇಡದ ಇಂಥ ಮಹಾತಾಯಿಯ ಜಗತ್ನಲ್ಲಿ ಕಂಡಿದ್ನ್ಯಾ?" ದತ್ತು ವಿಕಾರವಾಗಿ ಕಂಡ. ಅನಂತ ಚಿಟ್ಟೆ ಮೇಲೆ ನಿಂತ ಸಲೀಲತ್ತೆಯನ್ನು ನೋಡಿದ: ಮೂಗುಬಟ್ಟು ಇಲ್ಲದ ಮೂಗಿನ ಮೇಲೆ ಹರಿದ ತೂತಿತ್ತು; ಮೇಲ್ತುಟಿಯ ಮೇಲೆ ಅಲ್ಲಲ್ಲಿ ಮೀಸೆ ಕೂದಲು; ಕುಸಿದ ಹುಬ್ಬುಗಳು; ಕೆನ್ನೆಗಳ ಮಾಂಸ ಜೋತು ಮುಂಬಲ್ಲು ಹೊರ ಚಾಚಿದೆ; ತುಟಿ ದಪ್ಪಾಗಿದೆ; ಮುಖ ಚರ್ಮ ಗಡುಸಾಗಿದೆ; ಮುತ್ತೈದೆತನದಲ್ಲಿ ಚೆಂದಾಗಿದ್ದವಳು ಚಿಂತೆಯಲ್ಲಿ ಮುದುಕಿಯಾಗುತ್ತ ಗಂಡಸರಂತೆ ಒರಟಾಗಿದ್ದಾಳೆ.

ದತ್ತುನ ಸೈಕಲ್ ಡಬಲ್ ಸವಾರಿಯಲ್ಲಿ ಹೊರಟಿತು. ಅನಂತ ಕ್ಯಾರಿಯರ್ ಸೀಟಿನಲ್ಲಿದ್ದ. ಓಣಿಯ ಕೊನೆಯಲ್ಲಿ ತಿರುವಿದ; ಅಶ್ವತ್ಥ ಕಟ್ಟೆಗಳ ದಾಟಿದ; ಕಾಂಚಿಕಾಂಬೆಯ ದೇವಸ್ಥಾನ ಬಲಕ್ಕೆ ಬಿಟ್ಟ; ಜಾತ್ರೆಯ ಬಯಲು ಸಿಕ್ಕಿತು; ಗಡಿ ಕಾಣದ ಬೃಹತ್ ಗದ್ದೆಯ ಬಯಲು; ತೆಂಗಿನ ತೋಟ ಹಾದು ನೇರವಾಗಿ ತಾರಿಬಾಗಿಲ ಪುಂಡಲೀಕನ ಅಂಗಡಿಯ ಮುಂಗಟ್ಟಿಗೆ ಸೈಕಲ್ ನಿಲ್ಲಿಸಿದ. ಮನೆಯ ಹಾಗೆ ಭಾಸವಾಗುವ ಅಂಗಡಿ. ಈಗ ಭತ್ತ ಬೇಸಾಯ ಮಾಡುವವರಿಲ್ಲದೆ ಬಯಲು ಪಾಳು ಬಿದ್ದಿರುವುದಾಗಿಯೂ ರೇಷನ್ ಅಕ್ಕಿ ಊಟಕ್ಕೆ ಸಾಕಾಗುವುದರಿಂದ ನಷ್ಟದ ಗದ್ದೆಯ ದುಡಿಮೆ ಯಾರಿಗೂ ಬೇಡವಾಗಿದೆಯೆಂದೂ ಭತ್ತದ ಸರಬರಾಜಿಲ್ಲದೆ ಬಂಗ್ಲೆಪ್ಪನ ಅಕ್ಕಿ ಮಿಲ್ಲು ನಿಂತು ವರ್ಷವಾಯಿತೆಂದೂ ಮಿಲ್ಲಿನಲ್ಲಿ ಕೆಲಸಕಿದ್ದ ತಾನೀಗ ನಿರುದ್ಯೋಗಿಯಾಗಿದ್ದೇನೆಂದೂ